(ಅ) ಸಣ್ಣ ನೀರಾವರಿ ಉತ್ತರ ವಲಯ

ರಾಯಚೂರು ಜಿಲ್ಲೆ

6.	ದೇವದುರ್ಗ ತಾಲ್ಲೂಕು ನಿಲುವಂಜಿ ಬಳಿ ಏತನೀರಾವರಿ ಯೋಜನೆ.	ಜಾಕ್‌ವೆಲ್ ಅಗೆತ ಭಾಗಶಃ ರೈಸಿಂಗ್ ಮೈನ್‌ನ ಕೊಳವೆಗಳು ಸರಬರಾಜಾಗಿದ್ದು, ಇದಕ್ಕಾಗಿ ಅಗೆತ ಪ್ರಾರಂಭಿಸಲಾಗಿದೆ.
7.	ಮಾನ್ವಿ ತಾ:ಗೋರ್ಕಲ್ ಏತ ನೀರಾವರಿ ಯೋಜನೆ.	ಇನ್‌ಟೇಕ್‌ವೆಲ್ ನಿರ್ಮಾಣ ಇನಟೇಕ್ ಕೊಳವೆ ಜೋಡಣೆ, ಜೇಂಬರಿನ ಮಣ್ಣಿನ ಅಗೆತಹಾಗೂ ಪೂರಕ ಕಾಲುವೆ ಕೆಲಸ ಮುಗಿದಿದೆ. ಜಾಕ್‌ವೆಲ್ ಕೆಲಸ ಭೂಮಟ್ಟದವರೆಗೆ ಮುಗಿದಿದೆ. ರೈಸಿಂಗ್ ಮೈನ್‌ನ ಕೊಳವೆಗಳ ಸರಬರಾಜಿಗೆ.
8.	ಮಾನ್ವಿ ತಾ:ಮೋತ್ನಾಳ ಬಳಿ ಏತ ನೀರಾವರಿ ಯೋಜನೆ.	ಜಾಕ್‌ವೆಲ್, ಇನ್‌ಟೇಕ್ ಕೊಳವೆ, ಜಾಕ್‌ವೆಲ್‌ಗಾಗಿ ಮಣ್ಣಿನ ಅಗೆತದ ಕೆಲಸ ಪ್ರಾರಂಭಿಸಲಾಗಿದ್ದು, 8 ಅಡಿ ಆಳದ ವರೆಗೆ ಇಳಿಸಲಾಗಿದೆ. ನೀರೆತ್ತುವ ಯಂತ್ರದ ಮನೆಯ ಪಾಯದ ಕೆಲಸ ಮುಗಿದಿದೆ.
9.	ಸಿಂಧನೂರು ತಾ: ಹೂಡಾ ಏತ ನೀರಾವರಿ ಯೋಜನೆ	ಗುತ್ತಿಗೆ ಕರೆಯಲಾಗಿದೆ. ಅನುಮೋದನೆಯಾಗಿದ್ದು, ಕೆಲಸ ಪ್ರಾರಂಭಿಸಲಾಗಿದೆ.

(ಇ) ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗ

ಬಳ್ಳಾರಿ ಜಿಲ್ಲೆ

11.	ಸಿರಗುಪ್ಪ ತಾಲ್ಲೂಕು ಟಿ. ರಾಂಪುರ ಏತ ನೀರಾವರಿ ಯೋಜನೆ.	ಜಾಕ್‌ವೆಲ್ ಕೆಲಸಕ್ಕಾಗಿ ಪಾಯದ ಅಗೆತದ ಕಾಮಗಾರಿ ಪ್ರಗತಿಯಲ್ಲಿದೆ.
12.	ಹೊಸಪೇಟೆ ತಾ:ಚೌಕು ಏತ ನೀರಾವರಿ ಯೋಜನೆ.	ಇಲ್ಲಿಯವರೆಗೆ 1..2 ಲಕ್ಷರೂ.ಗಳು ಖರ್ಚಾಗಿದ್ದು, ಕೆಲಸ ಪ್ರಗತಿಯಲ್ಲಿದೆ.
13.	ಹೊಸಪೇಟೆ ತಾ:ಉಪ್ಪಾರಹಳ್ಳಿ ಏತ ನೀರಾವರಿ ಯೋಜನೆ.	ಇಲ್ಲಿಯವರೆಗೆ 8.12ಲಕ್ಷ ರೂ.ಗಳು ಖರ್ಚಾಗಿದ್ದು, ಕೆಲಸ ಪ್ರಗತಿಯಲ್ಲಿದೆ.

ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ನೇಮಕಾತಿ

146 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶ್ವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ನೇಮಕಕ್ಕೆ ಸರ್ಕಾರ ಉಪಯೋಗಿಸುವ ಮಾನ ದಂಡವೇನು?

ಆ) ಗರಿಷ್ಠ ಅಂಕಗಳ ಆಧಾರದ ಮೇಲೆ ನೇರ ನೇಮಕಾತಿ ಮಾಡಿದರೆ 8-10 ವರ್ಷಗಳ ಹಿಂದಿನ ನಿರುದ್ಯೋಗಿ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೆ?

ಇ) ಈ ಗೊಂದಲ ನಿವಾರಣೆಗೆ ನೇರ ಆಯ್ಕೆಗೆ ಬದಲಿಗೆ ಅರ್ಹತಾ ಪರೀಕ್ಷೆ ಅಥವಾ ಸಂದರ್ಶನ ಏನಾದರು ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ?

ಈ) ಈ ಕ್ರಮದಿಂದ ನಿಜವಾದ ವೃತ್ತಿ ಪರಿಣತಿ ಹೊಂದಿದವರಿಗೆ ಅವಕಾಶವನ್ನು ಕಲ್ಪಿಸಿ ಕೊಟ್ಟಂತಾಗುವುದಿಲ್ಲವೆ, ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ನಾಗರೀಕ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಾವಳಿಗಳು, 1983ರಲ್ಲಿ ನಿಗದಿ ಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳು.

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ದ.ಕನ್ನಡ ಜಿಲ್ಲೆಯಲ್ಲಿ ಪೋಲೀಸರ ಮೇಲೆ ಹಲ್ಲೆ ಕುರಿತು ದಾಖಲಾದ ದೂರು

74 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ, ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಿಂದೀಚೆಗೆ ಎಷ್ಟು ಕಡೆಗಳಲ್ಲಿ ಪೋಲೀಸರ ಮೇಲೆ ಮತ್ತು ಪೋಲೀಸ್ ವಾಹನಗಳ ಮೇಲೆ ಹಲ್ಲೆ ನಡೆದ ದೂರುಗಳು ದಾಖಲಾಗಿವೆ, (ಪ್ರಕರಣವಾರು ಮತ್ತು ತಾಲ್ಲೂಕುವಾರು ವಿವರ ಹಾಗೂ ಆಪಾದಿತರ ವಿಳಾಸ ತಿಳಿಸುವುದು)?

ಆ) ಈ ಬಗ್ಗೆ ಎಷ್ಟು ಜನರನ್ನು ಬಂಧಿಸಲಾಗಿದೆ (ಪೋಲೀಸ್ ಠಾಣೆವಾರು ವಿವರ ನೀಡುವುದು)?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಪೋಲೀಸರ ಮೇಲೆ ಹಲ್ಲೆ 16

ಪೋಲೀಸ ವಾಹನಗಳ ಮೇಲೆ 6

ವಿವರಗಳನ್ನು ಅನುಬಂಧ-ಅ ನಲ್ಲಿ ಲಗತ್ತಿಸಲಾಗಿದೆ.

ಆ) ಒಟ್ಟು 244 ಜನರನ್ನು ಬಂಧಿಸಲಾಗಿದೆ. ವಿವರಗಳನ್ನು ಅನುಬಂಧ-ಅ ಮತ್ತುಆರಲ್ಲಿ ಲಗತ್ತಿಸಲಾಗಿದೆ.